# ಮಲೆನಾಡಿನ ಕೆರೆಗಳ ಸಂರಕ್ಷಣೆ
# ಸಮಾಲೋಚನಾ ಕಾರ್ಯಾಗಾರಕ್ಕೆ ಆಹ್ವಾನ
## ದಿ: 15–3–2014 ಶನಿವಾರ ಬೆಳಿಗ್ಗೆ 10:30 ಗಂಟೆ
## ಸ್ಥಳ: ಶ್ರೀ ಸ್ವರ್ಣವಲ್ಲೀ ಮಹಾಸಂಸ್ಥಾನ ಸೋಂದಾ ಶಿರಸಿ

ಮಾನ್ಯರೇ,

**ಹಿನ್ನೆಲೆ**: ಪಶ್ಚಿಮಘಟ್ಟ ವ್ಯಾಪ್ತಿಯಲ್ಲಿರುವ ಔಗು ಪ್ರದೇಶ, ಹಳ್ಳಗಳ ಸಂರಕ್ಷಣೆ ಬಹಳ ಮುಖ್ಯ. ಈ ಕುರಿತು ಜನಜಾಗೃತಿ ಮಾಡಿಸಲು ತಳ ಮಟ್ಟದಲ್ಲಿ ಪ್ರಯತ್ನ ಅವಶ್ಯ. ಅದಕ್ಕಾಗಿ ಆಸಕ್ತ ಸಂಸ್ಥೆಗಳು ಒಗ್ಗೂಡಿ ಕಾರ್ಯತತ್ಪರರಾಗಬೇಕಿದೆ. ಶ್ರೀ ಸೋಂದಾ ಸ್ವರ್ಣವಲ್ಲೀ ಮಹಾಸಂಸ್ಥಾನದ ಪರಮಪೂಜ್ಯ ಶ್ರೀ ಗಂಗಾಧರೇಂದ್ರ ಸರಸ್ವತಿ ಮಹಾಸ್ವಾಮಿಗಳ ಗೌರವ ಅಧ್ಯಕ್ಷತೆ ಮತ್ತು ಮಾರ್ಗದರ್ಶನದಲ್ಲಿ 2014ರ ನವಂಬರ್‌ನಲ್ಲಿ ಶಿರಸಿಯಲ್ಲಿ ದೇಶಮಟ್ಟದ ಕೆರೆ ಸಮ್ಮೇಳನ ನಡೆಸಲು ಸಂಕಲ್ಪ ಮಾಡಲಾಗಿದೆ. ಭಾರತೀಯ ವಿಜ್ಞಾನ ಸಂಸ್ಥೆಯ ಕೆರೆ ಮತ್ತು ಔಗು ಪ್ರದೇಶ ಸಂರಕ್ಷಣಾ ವೇದಿಕೆಯವರು ಪ್ರತಿವರ್ಷ ಕೆರೆ ಸಮ್ಮೇಳನ ನಡೆಸುತ್ತಿದ್ದಾರೆ. ಈ ವರ್ಷ ಕರ್ನಾಟಕದಲ್ಲಿ ಶಿರಸಿಯಲ್ಲಿ ನಮ್ಮೆಲ್ಲರ ಸಹಯೋಗದಲ್ಲಿ ಕೆರೆ ಸಮ್ಮೇಳನ ನಡೆಯಲಿದೆ.

**ಈ ವರ್ಷದ ಸಮ್ಮೇಳನದ ವಿಷಯ:** ಪಶ್ಚಿಮಘಟ್ಟದ ಕೆರೆಗಳ ಸಂರಕ್ಷಣೆ. ಶಿರಸಿಯಲ್ಲಿ ನವೆಂಬರ್ 2014 ರಲ್ಲಿ 3 ದಿನಗಳ ಕಾಲ ನಡೆಯಲಿರುವ ಕೆರೆ ಸಮ್ಮೇಳನ ಸಂಘಟಿಸಲು ಹಾಗೂ ಕೆರೆಗಳ ಸಂರಕ್ಷಣಾ ಕಾರ್ಯ ದಲ್ಲಿ ತೊಡಗಿಸಿಕೊಳ್ಳಲು ಆಸಕ್ತ ಸ್ವಯಂಸೇವಾ ಸಂಸ್ಥೆಗಳು ಒಟ್ಟಿಗೆ ಸೇರಿ ಸಮಾಲೋಚನೆ ನಡೆಸಬೇಕಿದೆ. ಅದಕ್ಕಾಗಿ ಶಿರಸಿಯಲ್ಲಿ 15–3–2014 ರಂದು ಒಂದು ದಿನದ ಸಮಾಲೋಚನಾ ಕಾರ್ಯಾಗಾರ ಏರ್ಪಡಿಸಲಾಗಿದೆ.

**ಕಾರ್ಯಾಗಾರದ ಕುರಿತು** : ಮಾರ್ಚ 15ರ "ಮಲೆನಾಡಿನ ಕೆರೆಗಳ ಸಂರಕ್ಷಣೆ ಕುರಿತ ಕಾರ್ಯಾಗಾರದಲ್ಲಿ ಉ.ಕ. ಜಿಲ್ಲೆ ಜೊತೆ ಶಿವಮೊಗ್ಗ, ಚಿಕ್ಕಮಗಳೂರು, ಧಾರವಾಡ, ಬೆಂಗಳೂರುಗಳಿಂದ ಆಸಕ್ತ ಸಂಸ್ಥೆಗಳ ಪ್ರತಿನಿಧಿಗಳು ಭಾಗವಹಿಸಲಿದ್ದಾರೆ. ಕೆರೆ, ಔಗುಪ್ರದೇಶ, ಹೊಳೆ–ಹಳ್ಳಗಳ ಕುರಿತ ಮಾಹಿತಿ ಈಗಾಗಲೇ ಕೆರೆ ರಕ್ಷಣೆಯಲ್ಲಿ ತೊಡಗಿಸಿಕೊಂಡವರ ಅನುಭವ ವಿನಿಮಯ, ಕೆರೆಅಧ್ಯಯನಗಳ ಮಾಹಿತಿ; ಕೆರೆಸಮ್ಮೇಳನ ಪೂರ್ವ ಕಾರ್ಯಯೋಜನೆ;ಕೆರೆಸಮ್ಮೇಳನ ತಯಾರಿ ಕುರಿತು ಚರ್ಚೆ ಕಾರ್ಯಾಗಾರದಲ್ಲಿ ನಡೆಯಲಿದೆ. ಹಸಿರು ಸ್ವಾಮೀಜಿ ಎಂದೇ ಖ್ಯಾತರಾಗಿರುವ ಪೂಜ್ಯ ಸ್ವರ್ಣವಲ್ಲೀ ಸ್ವಾಮೀಜಿಯವರ ದಿವ್ಯ ಸಾಂನಿಧ್ಯದಲ್ಲಿ ಕಾರ್ಯಾಗಾರ ನಡೆಯಲಿದೆ. ಭಾರತೀಯ ವಿಜ್ಞಾನ ಸಂಸ್ಥೆಯ ಪರಿಸರ ಅಧ್ಯಯನ ಕೇಂದ್ರ, ಗ್ರಾಮಾಭ್ಯುದಯ ಸ್ವರ್ಣವಲ್ಲೀ, ವೃಕ್ಷಲಕ್ಷ ಆಂದೋಲನ, ಭೈರುಂಬೆಯ ಶ್ರೀ ಶಾರದಾಂಭಾ ಶಿಕ್ಷಣ ಮತ್ತು ಗ್ರಾಮೀಣ ಅಭಿವೃದ್ಧಿ ಸಂಸ್ಥೆ, ಲಯನ್ಸ ಕ್ಲಬ್ ಶಿರಸಿ ಇವರ ಸಹಯೋಗದಲ್ಲಿ ಕಾರ್ಯಾಗಾರ ನಡೆಯಲಿದೆ.

**ಆಹ್ವಾನ :** ತಾವು ಕಾರ್ಯಾಗಾರದ ಪ್ರತಿನಿಧಿಯಾಗಿ ಆಗಮಿಸಿ ಕೆರೆ ಸಂರಕ್ಷಣೆಯ ಪವಿತ್ರ ಕಾರ್ಯದಲ್ಲಿ ಕೈಜೋಡಿಸಲು ವಿನಂತಿ ಮಾಡುತ್ತೇವೆ. **ಸಂಪರ್ಕ: 9481461612**

ತಮ್ಮ ವಿಶ್ವಾಸಿ

ಶ್ರೀ ನಾರಾಯಣ ಗಡಿಕೈ ಶ್ರೀಅನಂತ ಹೆಗಡೆ ಅಶೀಸರ ಡಾ।ಎಂ.ಡಿ ಸುಭಾಸ್ ಚಂದ್ರನ್ ಕುಮಟಾ

"ಕೆರೆ" ಕಾರ್ಯಾಗಾರದ ಪರವಾಗಿ